ಅ) ಈ ಸಿ ಮತ್ತು ಡಿ ಜಮೀನುಗಳನ್ನು ಕಂದಾಯ ಇಲಾಖೆಯಲ್ಲಿ ಎಷ್ಟೋ ವರ್ಷಗಳ ಹಿಂದೆ ದರಖಾಸ್ತು ಹೊಂದಿದವರು ಇರುವರೇ ? ಈ ದರಖಾಸ್ತು ಜಮೀನಂಗಳಲ್ಲಿ ಅಡಿಕೆ, ತೆಂಗು, ತೋಟ ಮಾಡಿದವರು ಇದ್ದಾರೆಯೇ, ಹಾಗಿದ್ದಲ್ಲಿ, ಈ ರೀತಿ ಕೃಷಿಕರ ಜಮೀನನ್ನು ಅರಣ್ಯ ಇಲಾಖೆ, ಎಷ್ಟು ಜನರಿಂದ ಸ್ವಾಧೀನ ಪಡಿಸಿಕೊಂಡಿದೆ ?

ಇ) ಸಿ ಅಂಡ್ ಡಿ ಜಮೀನುಗಳಲ್ಲಿ ದರಖಾಸ್ತು ಮಂಜೂರಾಗಿದ್ದು ಸ್ವಾಧೀನವಿಲ್ಲದ ಬಡ ಹಿಂದುಳಿದ ವರ್ಗದ ಪರಿಶಿಷ್ಟ ಜಾತಿ, ಪಂಗಡದವರ ಜಮೀನಗಳನ್ನು ಮಾತ್ರ ಅರಣ್ಯ ಇಲಾಖೆ ಸ್ವಾಧೀನ ಪಡಿಸಿಕೊಂಡಿರುವುದು ನಿಜವೇ ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು).—

ಅ) ಸುಳ್ಯ ತಾಲ್ಲೂಕಿನಲ್ಲಿರುವ ಸುಳ್ಯ, ಪಂಜ ಸುಬ್ರಮಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ೪೭, ೯೪೧.೬೦ ಎಕರೆ ಸಿ ಮತ್ತು ಡಿ ವರ್ಗದ ಭೂಮಿಯನ್ನು ಕಂದಾಯ ಇಲಾಖೆಯವರು ಅರಣ್ಯ ಇಲಾಖೆಗೆ ರಿಕಾರ್ಡ್ ಮುಖಾಂತರ ಎಲ್ಲಿ ಹೇಗಿವೆಯೋ ಹಾಗೆ ವರ್ಗಾಯಿಸಿರುತ್ತಾರೆ. ಆದರೆ ಈ ಎಲ್ಲಾ ಭೂಮಿ ಅರಣ್ಯ ಇಲಾಖೆಯ ಮೋಜಣಿ ನಡೆಸಿ ಸಂಪೂರ್ಣ ಸ್ವಾಧೀನಕ್ಕೆ ಬಂದಿಲ್ಲ. ಈ ಸಿ ಮತ್ತು ಡಿ ಜಮೀನುಗಳ ಮೋಜಣಿ ಕಾರ್ಯವನ್ನು ಇತ್ತೀಚೆಗೆ ಅರಣ್ಯ ಕಾರ್ಯಯೋಜನೆ ವಿಭಾಗದವರು ಕೈಗೆತ್ತಿಕೊಂಡಿರುತ್ತಾರೆ.

ಆ) ಸ್ಥಳದ ಸರಿಯಾದ ಗುರುತುಗಳು ತಿಳಿಯದ ಕಾರಣ ಈ ಸ್ಥಳಗಳಲ್ಲಿ ಕಂದಾಯ ಇಲಾಖೆಯವರು ಎಷ್ಟು ವರ್ಷಗಳ ಹಿಂದೆ ದರಖಾಸ್ತು ಮಂಜೂರು ಮಾಡಿರುತ್ತಾರೆ ಎಂಬುದರ ಬಗ್ಗೆ ಸರಿಯಾದ ಮಾಹಿತಿಯು ಈ ಇಲಾಖೆಯಲ್ಲಿ ಲಭ್ಯವಿಲ್ಲ. ಆದುದರಿಂದ ಈ ಮಾಹಿತಿಯನ್ನು ಕಂದಾಯ ಇಲಾಖೆಯವರೇ ಕೊಡಬೇಕಾಗಿದೆ. ಈ ತನಕ ಅರಣ್ಯ ಇಲಾಖೆಯಿಂದ ಮಂಗಳೂರು ಅರಣ್ಯ ವಿಭಾಗದಲ್ಲಿ ತೆಂಗು, ಅಡಿಕೆ, ಕೃಷಿ ಮೊದಲಾದ ಭೂಮಿಯನ್ನು ಸ್ವಾಧೀನಪಡಿಸಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಕಂಶಾಲ — ಮಾನ್ಯ ಅಧ್ಯಕ್ಷರೇ, ೧೯೬೨-೬೪ರಲ್ಲಿ ಈ ಜಮೀನನ್ನು ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯವರು ಲಿಸ್ಟ್ ಮಾಡಿದ್ದರು. ಆದರೆ ಮತ್ತೆ ಈಗ ಟೇಬಲ್ ವರ್ಕ್ ಮಾಡಿ ಅದನ್ನು ೧೯೬೪ರಲ್ಲಿ ಮತ್ತೆ ಅರಣ್ಯ ಇಲಾಖೆಗೆ ಹ್ಯಾಂಡ್‌ಓವರ್ ಮಾಡಿದ್ದಾರೆ ಇದರಿಂದ ಬಹಳ ತೊಂದರೆಯಾಗುವುದಿಲ್ಲವೆ ?

ಶ್ರೀ ಜೆ. ಎಸ್. ದೇಶ್‌ಮುಖ್.— ಅಧ್ಯಕ್ಷರೇ ಈಗಾಗಲೇ ಒಂದು ಸಮಿತಿಯನ್ನು ತಾಲೂಕು ಮಟ್ಟದಲ್ಲಿ ನೇಮಿಸಿದ್ದೇವೆ. ಅದರಲ್ಲಿ ಶಾಸಕರು ಮತ್ತು ಸರ್ವೆಯರ್‌ಗಳು ಕೂಡ ಇದ್ದಾರೆ. ಇನ್ನು ಆರು ತಿಂಗಳಲ್ಲಿ ಇದನ್ನು ಸಂಪೂರ್ಣವಾಗಿ ತನಿಖೆ ಮಾಡಿಸಿದ ಮೇಲೆ ಎಷ್ಟು ಸಿ ಅಂಡ್ ಡಿ ಲ್ಯಾಂಡ್ ಅರಣ್ಯ ಇಲಾಖೆಗೆ ವರ್ಗಾಣೆಯಾಗುತ್ತದೆ ಎಂಬುದು ಗೊತ್ತಾಗುತ್ತದೆ.

## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

### ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಆದ್ಯತೆಯ ಪದ್ಧತಿ

೧೮೩. ಶ್ರೀ ಎಂ. ವರದೇಗೌಡ (ಚನ್ನಪಟ್ಟಣ).— ವಾಣಿಜ್ಯ ಕೈಗಾರಿಕೆ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೈತನ ನೀರಾವರಿ ಬಾವಿಗಳಿಗೆ ಹಿರಿತನ ಆಧಾರದ ಮೇಲೆ ವಿದ್ಯುಚ್ಛಕ್ತಿ ಒದಗಿಸುತ್ತಿರುವುದರಿಂದ ರೈತನಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಆದ್ಯತೆ ಮೇರೆಗೆ ವಿದ್ಯುತ್ ಒದಗಿಸಲು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಮತ್ತು ಆ) ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಕೇವಲ ಹಿರಿತನದ ಆಧಾರದ ಮೇಲೆ ಒದಗಿಸಲಾಗುತ್ತಿಲ್ಲ. ಅರ್ಜಿಗಳನ್ನು ಅನುಬಂಧದಲ್ಲಿ ತೋರಿಸಿರುವಂತೆ ವರ್ಗೀಕರಣ ಮಾಡಿ ವಿದ್ಯುತ್ತನ್ನು ಒದಗಿಸಲಾಗುತ್ತಿದೆ.

ಅನುಬಂಧ

ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವಲ್ಲಿನ ಆದ್ಯತೆ ನಿಗದಿ ಮಾಡುವ ಬಗ್ಗೆ ವಿವರಗಳು ಈ ಕೆಳಕಂಡಂತಿವೆ.

ಅ) ವರ್ಗ 'ಅ' ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅರ್ಜಿದಾರರು.

ಆ) ವರ್ಗ 'ಆ' ೩೧-೩-೮೬ಕ್ಕೆ ಒಂದು ವರ್ಷಕ್ಕೂ ಮೀರಿ ಬಾಕಿ ಉಳಿದಿರುವ ಕೈಗೆತ್ತಿಕೊಳ್ಳಬೇಕಾಗಿರುವ ಎಲ್ಲಾ ಕಾರ್ಯದೇಶಗಳು (ಮಂಜೂರಾದ ಅಂದಾಜುಗಳು).

ಇ) ವರ್ಗ 'ಅ' ಇದನ್ನು 'ಅ-೧' ಮತ್ತು ಅ-೨ ಎಂದು ಪುನರ್ವಿಂಗಡಿಸಬೇಕು.

(೧) ವರ್ಗ 'ಅ-೧'

ಒಂದರಿಂದ ೫ ಕಂಬುಗಳವರೆಗೆ ಬೇಕಾಗುವ ಎಲ್ಲಾ ಪರಿಶಿಷ್ಟ ಜಾತಿ ಮತ್ತು ವರ್ಗಗಳೇತರ ಅರ್ಜಿಗಳು. ೩ ಅಂದಾಜುಗಳು

(೨) ಆರು ಮತ್ತು ಅದಕ್ಕೂ ಹೆಚ್ಚಿನ ಕಂಬುಗಳು ಬೇಕಾಗುವ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳೇತರ ಅರ್ಜಿಗಳು. ೧ ಅಂದಾಜು

## ಬಿಜಾಪುರ ಜಿಲ್ಲೆಯಲ್ಲಿ ನೆಡಲಾಗಿರುವ ಗಿಡಗಳು

೨೦೬೨(ಡಿ) ಶ್ರೀ ಎಸ್. ಎಸ್. ಪೀಡ (ಇಂಡಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸಕ್ತ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ರಾಜ್ಯದಲ್ಲಿ ನೆಟ್ಟ ಸಸಿಗಳ ಸಂಖ್ಯೆ ಎಷ್ಟು ?

ಆ) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಗಿಡಗಳನ್ನು ನೆಡಲಾಯಿತು ?

ಇ) ಈ ಅವಧಿಯಲ್ಲಿ ಬಿಜಾಪುರ ಜಿಲ್ಲೆಗೆ ಖರ್ಚು ಮಾಡಿದ ಹಣವೆಷ್ಟು ?

ಈ) ಜಿಲ್ಲೆಯಲ್ಲಿ ಜೀವಂತವಿರುವ ಗಿಡಗಳ ಸಂಖ್ಯೆ ಎಷ್ಟು ?

ಉ) ಜಿಲ್ಲೆಯಲ್ಲಿ ವನ ಬೆಳೆಸುವ ಕಾರ್ಯಕ್ರಮ ಪ್ರಗತಿದಾಯಕ ಹಾಗೂ ಸಮಾಧಾನಕರ ವಾಗಿದೆಯೇ ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ)

| | |
|---|---|
| ೧೯೮೫-೮೪ | ೨೨೫೪.೮೮ ಲಕ್ಷ |
| ೧೯೮೪-೮೫ | ೨೩೦೨.೫೫ ಲಕ್ಷ |
| ೧೯೮೫-೮೬ | ೨೭೨೫.೬೪ ಲಕ್ಷ |
| ೧೯೮೬-೮೭ | ೨೨೬೧.೦೪ ಲಕ್ಷ |